‘ಆಚಾರಧರ್ಮ’ ಗ್ರಂಥಮಾಲಿಕೆ : ಸಾತ್ತ್ವಿಕ ವೇಷಭೂಷಣ - ಖಂಡ ೧

# ಬಟ್ಟೆಗಳು ಆಧ್ಯಾತ್ಮಿಕ ದೃಷ್ಟಿಯಿಂದ ಹೇಗಿರಬೇಕು ?

(How should the clothes be from a spiritual perspective)

ಕನ್ನಡ (Kannada)

**ಸಂಕಲನಕಾರರು**

ಹಿಂದೂ ರಾಷ್ಟ್ರ ಸ್ಥಾಪನೆಯ ಉದ್ಘೋಷ ಮಾಡುವ

**ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆ**

(‘ಸಚ್ಚಿದಾನಂದ ಪರಬ್ರಹ್ಮ’ ಬಿರುದಿನ ಸ್ಪಷ್ಟೀಕರಣವನ್ನು ‘ಪುಟ ೧೬’ ರಲ್ಲಿ ಓದಿ.)

**ಸೂಕ್ಷ್ಮಜ್ಞಾನ ಪಡೆದವರು**

**ಶ್ರೀಚಿತ್‌ಶಕ್ತಿ (ಸೌ.) ಅಂಜಲಿ ಮುಕುಲ ಗಾಡಗೀಳ**

**ಕು. ಮಧುರಾ ಭಿಕಾಜಿ ಭೋಸಲೆ**

**ಸೌ. ಪ್ರಿಯಾಂಕಾ ಸುಯಶ ಗಾಡಗೀಳ ಮತ್ತು ಇತರರು**

**ಸನಾತನ ಸಂಸ್ಥೆ**

**ಸನಾತನದ ಗ್ರಂಥಸಂಪತ್ತಿನ ಅದ್ವಿತೀಯತೆ !**

ಸನಾತನದ ಬಹುತೇಕ ಗ್ರಂಥಗಳಲ್ಲಿನ ಸುಮಾರು ಶೇ. ೨೦ ರಷ್ಟು ಬರವಣಿಗೆಗಳು ‘ಸೂಕ್ಷ್ಮದಿಂದ ಪಡೆದುಕೊಂಡ ದಿವ್ಯ ಜ್ಞಾನ’ವಾಗಿದ್ದು, ಪೃಥ್ವಿಯಲ್ಲಿ ಲಭ್ಯವಿರುವ ಜ್ಞಾನದ ತುಲನೆಯಲ್ಲಿ ಅದು ಅದ್ವಿತೀಯವಾಗಿದೆ !

**ಪ್ರಕಾಶಕರು** : ಶ್ರೀ ಸಿದ್ಧೇಶ್ವರ ಧರ್ಮಜಾಗೃತಿ ಸಂಸ್ಥೆ
Shree Siddheshwar Dharmajagruti Sanstha
ಮ.ಸಂ. 2ಬಿ–29ಎ, ಇಂದಿರಾನಗರ, ಕುಕ್ಕಿಕಟ್ಟೆ,
ಉಡುಪಿ 576 101, ಕರ್ನಾಟಕ. ದೂ.ಕ್ರ. : +91 93424 35617
ಇತರ ದೂ.ಕ್ರ. (ಗೋವಾ) : +91 (0832) 2312664
ವಿ–ಅಂಚೆ : granth@sanatan.org

**ಮುಖಪುಟದ ಪರಿಕಲ್ಪನೆ** : ಕು. ಭಾವಿನಿ ಕಪಾಡಿಯಾ ಮತ್ತು ಸೌ. ಆರತಿ ಪುರಾಣಿಕ

**First Edition** : Hanuman Jayanthi, Kaliyug Varsh 5111
(9th April 2009)

**Third Edition** : ShriKrishna Jayanti, Kaliyug Varsh 5124
(18th August 2022)

Translated from the original Marathi text 'Kapade adhyatmik-drushtya Kase Asavet ?'
ಪ್ರಸ್ತುತ ಗ್ರಂಥವು ಹಿಂದಿ, ಆಂಗ್ಲ, ತಮಿಳು ಮತ್ತು ಗುಜರಾತಿ ಭಾಷೆಯಲ್ಲೂ ಲಭ್ಯವಿದೆ.

**ಅನುವಾದಕರು** : ಕು. ರಶ್ಮಿ ನಾಯಕ್, ಡಾ. ಪ್ರಕಾಶ ಘಾಳಿ
ಶ್ರೀ. ಗಣೇಶ ರಾಜಾರಾಮ ಕಾಮತ್

**ಮುದ್ರಣಸ್ಥಳ** : ಆಮೋದ್ ಗ್ರಾಫಿಕ್ಸ್, ಬೆಂಗಳೂರು – 560 010

**ದೇಣಿಗೆ ಮೌಲ್ಯ** : ₹ 105/-

**ISBN** : 978-93-92952-02-9 ॐ ಗ್ರಂಥ ಕ್ರ. : 135

© **ಪ್ರಕಾಶಕರು** All rights are reserved. No part of this publication maybe reproduced, stored in a retrieval system or transmitted, in any form or by any means, mechanical, photocopying, recording or otherwise, without prior written permission of the original publisher. Violators will be liable for criminal / civil action.

# ವಿಷಯಸೂಚಿ

೧. ಗ್ರಂಥದ ಸಂಕಲನಕಾರರ ಪರಿಚಯ ೬

೨. ಆಧ್ಯಾತ್ಮಿಕ ಪರಿಭಾಷೆಯಲ್ಲಿನ ವೈಶಿಷ್ಟ್ಯಪೂರ್ಣ ಪ್ರಸ್ತಾವನೆ ! ೯

೩. ಗ್ರಂಥದ ಮುಖಪುಟದ ಮೇಲಾದ ಆಸುರೀ ಶಕ್ತಿಗಳ ಹಲ್ಲೆಯೆಂದರೆ, ಉಪಯುಕ್ತತೆ ಮತ್ತು ಸಾತ್ತ್ವಿಕತೆಗಳ ಸತ್ತ್ವಪರೀಕ್ಷೆಯಲ್ಲಿ ಗ್ರಂಥವು ಉತ್ತೀರ್ಣವಾದುದಕ್ಕೆ ಸಿಕ್ಕಿರುವ ಒಂದು ಪ್ರಮಾಣಪತ್ರವೇ ಆಗಿದೆ ! ೧೨

೪. ಮನೋಗತ ೧೪

---

## ಗ್ರಂಥದ ಅನುಕ್ರಮಣಿಕೆ

(ಕೆಲವು ಮಹತ್ವದ ಅಂಶಗಳನ್ನು '*' ಈ ಗುರುತಿನಲ್ಲಿ ಕೊಡಲಾಗಿದೆ.)

೧. ಬಟ್ಟೆಗಳನ್ನು ಧರಿಸುವುದರ ಮಹತ್ವ ಮತ್ತು ಲಾಭಗಳು ೧೭

೨. ಬಟ್ಟೆಗಳ ಸಾತ್ತ್ವಿಕತೆಗೆ ಆವಶ್ಯಕವಿರುವ ಘಟಕಗಳು ಮತ್ತು ಅವುಗಳ ಮಹತ್ವ ೨೨

೩. ಬಟ್ಟೆಗಳ ವಿಧಗಳು ೨೩

* ಕೃತಕ ದಾರಗಳಿಂದ ತಯಾರಿಸಿದ ಬಟ್ಟೆಗಳ ಬದಲು ನೈಸರ್ಗಿಕ ದಾರಗಳಿಂದ ತಯಾರಿಸಿದ ಬಟ್ಟೆಗಳನ್ನು ಏಕೆ ಬಳಸಬೇಕು ? ೩೬

೪. ಬಟ್ಟೆಯ ಬಣ್ಣ ೪೩

* ಬಟ್ಟೆಗಳ ಬಣ್ಣದ ಆಯ್ಕೆಯ ಹಿಂದಿನ ಸಾಮಾನ್ಯ ಆಧ್ಯಾತ್ಮಿಕ ದೃಷ್ಟಿಕೋನ ೪೮

* ಹಿಂದೂ ಧರ್ಮದಲ್ಲಿ ಕಪ್ಪು ಬಣ್ಣವನ್ನು ನಿಷೇಧಿಸಲಾಗಿದೆ ೫೩

೫. ಬಟ್ಟೆಯ ಮೇಲಿರುವ ವಿನ್ಯಾಸ ೬೩

* ಬಟ್ಟೆಗಳ ಮೇಲಿನ ವಿನ್ಯಾಸವು ಸಾತ್ತ್ವಿಕತೆಯ ದೃಷ್ಟಿಯಿಂದ ಹೇಗಿರಬೇಕು? ೬೪

೬. ಬಟ್ಟೆಗಳನ್ನು ಹೊಲಿಯುವ ಪದ್ಧತಿ ೬೭

* ಹಿಂದಿನ ಕಾಲದ ಗಂಟು ಹಾಕುವ ಬಟ್ಟೆಗಳನ್ನು ಧರಿಸುವ ಯೋಗ್ಯ ಪದ್ಧತಿ ೬೭

* ಉಡುಪುಗಳಿಗೆ ಆದಷ್ಟು ಕಡಿಮೆ ಹೊಲಿಗೆಗಳು ಏಕಿರಬೇಕು ? ೬೮

೭. ಬಟ್ಟೆಗಳನ್ನು ಉಪಯೋಗಿಸುವ ಸಂದರ್ಭದಲ್ಲಿ ಕೆಲವು ವ್ಯಾವಹಾರಿಕ ಸೂಚನೆಗಳು ೭೧

* ಹರಿದ ಅಥವಾ ಹೊಲಿಗೆ ಬಿಚ್ಚಿದ ಬಟ್ಟೆಗಳನ್ನು ಏಕೆ ಉಪಯೋಗಿಸಬಾರದು ? ೭೩

* ಇತರರು ಉಪಯೋಗಿಸಿದ ಬಟ್ಟೆಗಳನ್ನು ಏಕೆ ಉಪಯೋಗಿಸಬಾರದು ? ೭೪

* ಉನ್ನತರು ಉಪಯೋಗಿಸಿದ ಬಟ್ಟೆಗಳನ್ನು ಉಪಯೋಗಿಸುವುದರ ಲಾಭಗಳು ೭೪

**೮. ಭಾವವಿರುವವರು, ಒಳ್ಳೆಯ ಆಧ್ಯಾತ್ಮಿಕ ಮಟ್ಟವಿರುವವರು, ಸಂತರು ಮತ್ತು ಗುರುಕೃಪಾಯೋಗಾನುಸಾರ ಸಾಧನೆ ಮಾಡುವವರು ಬಾಹ್ಯ ವೇಷಭೂಷಣಗಳಿಗೆ ಮಹತ್ವ ಕೊಡುವ ಆವಶ್ಯಕತೆಯಿಲ್ಲ ೮೧**

**卐 ಸಂಕಲನಕಾರರ ವೈಜ್ಞಾನಿಕ ದೃಷ್ಟಿಕೋನ ಮತ್ತು ಇತರ ಮಾಹಿತಿ ೮೩**


**ಜುಲೈ ೨೦೨೨ ರ ವರೆಗೆ ಸನಾತನದ ೩೫೭ ಗ್ರಂಥಗಳ ಕನ್ನಡ, ಹಿಂದಿ, ಆಂಗ್ಲ, ಮರಾಠಿ, ಗುಜರಾತಿ, ತಮಿಳು, ತೆಲುಗು, ಮಲಯಾಳಂ, ಬಂಗಾಲಿ, ಒರಿಯಾ, ಪಂಜಾಬಿ, ಅಸ್ಸಾಮಿ, ನೇಪಾಳಿ, ಜರ್ಮನ್, ಸರ್ಬಿಯನ್, ಫ್ರೆಂಚ್ ಮತ್ತು ಸ್ಪ್ಯಾನಿಶ್ ಈ ೧೭ ಭಾಷೆಗಳಲ್ಲಿ ೮೯,೯೭,೦೦೦ ಪ್ರತಿಗಳು !**

**ಪರಾತ್ಪರ ಗುರು ಡಾ. ಆಠವಲೆಯವರ ಆಧ್ಯಾತ್ಮಿಕ ಉತ್ತರಾಧಿಕಾರಿಗಳಾದ ಸದ್ಗುರು (ಸೌ.) ಬಿಂದಾ ಸಿಂಗಬಾಳ ಮತ್ತು ಸದ್ಗುರು (ಸೌ.) ಅಂಜಲಿ ಗಾಡಗೀಳ ಇವರ ಹೆಸರಿಗೆ ವಿಶಿಷ್ಟ ಆಧ್ಯಾತ್ಮಿಕ ಬಿರುದು ಸೇರಿಸಿರುವುದರ ಹಿಂದಿನ ಕಾರಣ**

ನಾಡಿಪಟ್ಟಿವಾಚನದ ಮಾಧ್ಯಮದಿಂದ ಸಪ್ತರ್ಷಿಗಳು ಸನಾತನಕ್ಕೆ ಮಾರ್ಗದರ್ಶನ ಮಾಡುತ್ತಾರೆ. ೧೩.೫.೨೦೨೦ ರಂದು ಸಪ್ತರ್ಷಿಗಳು, 'ಇನ್ನು ಮುಂದೆ ಸದ್ಗುರು (ಸೌ.) ಬಿಂದಾ ಸಿಂಗಬಾಳರನ್ನು 'ಶ್ರೀಸತ್‌ಶಕ್ತಿ (ಸೌ.) ಬಿಂದಾ ಸಿಂಗಬಾಳ' ಮತ್ತು ಸದ್ಗುರು (ಸೌ.) ಅಂಜಲಿ ಗಾಡಗೀಳರನ್ನು 'ಶ್ರೀಚಿತ್‌ಶಕ್ತಿ (ಸೌ.) ಅಂಜಲಿ ಗಾಡಗೀಳ' ಎಂದು ಸಂಬೋಧಿಸಬೇಕು; ಏಕೆಂದರೆ ಈ ಹೆಸರುಗಳಿಂದ ಇಬ್ಬರಿಗೂ ದೇವಿತತ್ತ್ವ ಸಿಗುವುದು, ಹಾಗೆಯೇ ಆ ರೀತಿ ಉಲ್ಲೇಖಿಸುವವರಿಗೂ ಇದರ ಲಾಭವಾಗುವುದು' ಎಂದು ಹೇಳಿದ್ದಾರೆ. ಸಪ್ತರ್ಷಿಗಳ ಆಜ್ಞೆಗನುಸಾರ ಈ ರೀತಿ ಸಂಬೋಧನೆ ಮಾಡಲಾಗುತ್ತಿದೆ. ಇವರ ಹೆಸರಿನ ಸಂಬೋಧನೆಯ ಬಗ್ಗೆ ಪರಾತ್ಪರ ಗುರು ಡಾ. ಆಠವಲೆಯವರು "ಶ್ರೀಸತ್‌ಶಕ್ತಿ'ಯು ಭಗವಂತನ ಶಾಶ್ವತ ಸ್ವರೂಪಕ್ಕೆ ಸಂಬಂಧಿಸಿದೆ ಮತ್ತು 'ಶ್ರೀಚಿತ್‌ಶಕ್ತಿ'ಯು ಭಗವಂತನ ವೈಶ್ವಿಕ ಜ್ಞಾನಕ್ಕೆ ಸಂಬಂಧಿಸಿದೆ" ಎಂದು ಹೇಳಿದರು.

## ವಿಷಯಸೂಚಿಯಲ್ಲಿನ ಕ್ರಮಾಂಕ ೪

### ಮನೋಗತ

'ವಿಕೃತವಾಸೋ ನ ಆಚ್ಛಾದನೀಯಮ್ ।', ಎಂದು ಹೇಳುತ್ತಾರೆ. ಇದರ ಅರ್ಥವೇನೆಂದರೆ ಮನುಷ್ಯನು ವಿಕೃತ ವೇಷವನ್ನು ಮಾಡಬಾರದು. ಹೆಚ್ಚಿನ ಸಮಯ ಮನುಷ್ಯರ ವೇಷವು ಅವರು ಧರಿಸಿದ ಬಟ್ಟೆಗಳ ಮೇಲೆ ಅವಲಂಬಿಸಿರುತ್ತದೆ. ಇತ್ತೀಚಿನ ತರುಣರು 'ಫ್ಯಾಶನ್ನಿ'ನ ಹೆಸರಿನಲ್ಲಿ ಚಿತ್ರವಿಚಿತ್ರ ಆಕೃತಿಗಳಿರುವ, ವಿಚಿತ್ರ ಬಣ್ಣಗಳ, ಜೀನ್ಸ್-ಸ್ಟ್ರೆಚೇಬಲ್ಸ್‌ನಂತಹ ಬಿಗಿಯಾದ, ಶರೀರವನ್ನು ಪ್ರದರ್ಶಿಸುವ, ಇಂತಹ ಅನೇಕ ರೀತಿಯ ಬಟ್ಟೆಗಳನ್ನು ಉಪಯೋಗಿಸುತ್ತಿದ್ದಾರೆ. ಇವು ವಿಕೃತ ವೇಷಭೂಷಣಗಳಾಗಿವೆ. ವಿಕೃತ ವೇಷಭೂಷಣಗಳೆಂದರೆ ರಜ-ತಮಾತ್ಮಕ ಸ್ಪಂದನಗಳನ್ನು ನಿರ್ಮಿಸುವ ವೇಷ ಭೂಷಣಗಳು. ಇಂತಹ ವೇಷಭೂಷಣಗಳಿಂದ ಮನುಷ್ಯನ ಬುದ್ಧಿಯು ವಿಕೃತವಾಗುತ್ತದೆ, ಅವನು ಅನೇಕ ದುಷ್ಪ್ರವೃತ್ತಿಗಳ ಗುಲಾಮನಾಗುತ್ತಾನೆ, ಕಾಮ-ಕ್ರೋಧಾದಿಗಳಂತಹ ಷಡ್ವೈರಿಗಳ ಅಧೀನನಾಗುತ್ತಾನೆ ಮತ್ತು ಕೆಟ್ಟ ಶಕ್ತಿಗಳ ಹಲ್ಲೆಗಳಿಗೆ ಬಲಿಯಾಗುತ್ತಾನೆ. ಇದಕ್ಕೆ ವಿರುದ್ಧವಾಗಿ ಮನುಷ್ಯನು ಸಾತ್ತ್ವಿಕ ಬಟ್ಟೆಗಳನ್ನು ಧರಿಸುವುದರಿಂದ ಅವನಿಗೆ ಈಶ್ವರನ ಚೈತನ್ಯವನ್ನು ಆಕರ್ಷಿಸಲು ಸಾಧ್ಯವಾಗುವುದರಿಂದ ಅವನ ಮನಸ್ಸು ಮತ್ತು ಬುದ್ಧಿಯು ಸಾತ್ತ್ವಿಕವಾಗುತ್ತವೆ. ಅವನು ಸದಾಚಾರಿ ಮತ್ತು ವಿವೇಕಿಯಾಗುವುದರ ಜೊತೆಗೆ ಕೆಟ್ಟ ಶಕ್ತಿಗಳ ಹಲ್ಲೆಗಳಿಂದ ರಕ್ಷಣೆಯಾಗಲು ಸಹಾಯವಾಗುತ್ತದೆ.

ಪ್ರತಿಯೊಂದು ವಸ್ತುವಿಗೆ ಅದರ ಗುಣಧರ್ಮಕ್ಕನುಸಾರ ಸ್ಪಂದನಗಳಿರುತ್ತವೆ. ಬಟ್ಟೆಯ ವಿಧ, ಬಣ್ಣ, ವಿನ್ಯಾಸ, ಬಟ್ಟೆಗಳ ಹೊಲಿಗೆ, ಆಕಾರ ಮುಂತಾದ ವಿಷಯಗಳ ಮೇಲೆ ಬಟ್ಟೆಯ ಸ್ಪಂದನಗಳು ಅವಲಂಬಿಸಿರುತ್ತವೆ. ಈ ವಿಷಯಗಳು ಎಷ್ಟು ಸಾತ್ತ್ವಿಕವಾಗಿರುತ್ತವೆಯೋ, ಬಟ್ಟೆಗಳೂ ಅಷ್ಟೇ ಸಾತ್ತ್ವಿಕವಾಗುತ್ತವೆ. ಈ ವಿಷಯಗಳು ಸಾತ್ತ್ವಿಕವಾಗಿರಬೇಕು ಅಂದರೆ ಹೇಗಿರಬೇಕು ಎಂಬುದನ್ನು ಈ ಗ್ರಂಥದಲ್ಲಿ ನೀಡಲಾಗಿದೆ. ನೈಲಾನ್, ಟೆರಿಕಾಟ್ ಮುಂತಾದ ಕೃತ್ರಿಮ ದಾರಗಳಿಂದ ತಯಾರಿಸಿದ ಬಟ್ಟೆಗಳಿಗಿಂತ ಹತ್ತಿ, ರೇಷ್ಮೆಯಂತಹ ನೈಸರ್ಗಿಕ ದಾರಗಳಿಂದ ತಯಾರಿಸಿದ ಬಟ್ಟೆಗಳನ್ನು ಏಕೆ ಉಪಯೋಗಿಸಬೇಕು, ಸಾತ್ತ್ವಿಕ ಬಣ್ಣಗಳು ಯಾವುವು, ವಿನ್ಯಾಸಗಳಿಲ್ಲದ ಬಟ್ಟೆಗಳು ಏಕೆ ಹೆಚ್ಚು ಯೋಗ್ಯವಾಗಿವೆ, ಬಟ್ಟೆಗಳ ಶುದ್ಧೀಕರಣವು ಏಕೆ ಆವಶ್ಯಕವಾಗಿದೆ ಇಂತಹ ಅನೇಕ ಪ್ರಶ್ನೆಗಳ ಉತ್ತರಗಳಿಂದ ಬಟ್ಟೆಗಳ ಹಿಂದಿನ ಅಧ್ಯಾತ್ಮಶಾಸ್ತ್ರದ ದೃಷ್ಟಿಕೋನವು ಸ್ಪಷ್ಟವಾಗಲು ಸಹಾಯವಾಗುವುದು. ಸಾತ್ತ್ವಿಕ ಬಟ್ಟೆಗಳನ್ನು ಆರಿಸುವಾಗ ನಮ್ಮ ಇಷ್ಟಾನಿಷ್ಟಗಳಿಗಿಂತ ಸ್ಪಂದನಶಾಸ್ತ್ರದ ಅಧ್ಯಯನವು

ಹೆಚ್ಚು ಉಪಯುಕ್ತವಾಗಿದೆ. ಅದು ಹೇಗಿರಬೇಕು ಎಂಬುದರ ಅಲ್ಪ ಪರಿಚಯವೂ ಈ ಗ್ರಂಥದಲ್ಲಿ ನೀಡಿದ ಕೆಲವು ಸೂಕ್ಷ್ಮ ಪ್ರಯೋಗಗಳಿಂದ ಸಿಗುವುದು.

ಸಾಮಾನ್ಯ ಮನುಷ್ಯರು ಚೈತನ್ಯವನ್ನು ಆಕರ್ಷಿಸುವ ದೃಷ್ಟಿಯಿಂದ ಸಾತ್ತ್ವಿಕ ಬಟ್ಟೆಗಳನ್ನೇ ಧರಿಸಬೇಕು. ಯಾರಾದರೊಬ್ಬ ವ್ಯಕ್ತಿಯಲ್ಲಿ ಭಾವವಿದ್ದರೆ, ಅವನ ವೃತ್ತಿಯು ಸಾತ್ತ್ವಿಕವಾಗಿರುತ್ತದೆ ಮತ್ತು ಅವನಿಂದಾಗುವ ಭಾವಯುಕ್ತ ಕೃತಿಯಿಂದ ಅವನಿಗೆ ಈಶ್ವರನ ಚೈತನ್ಯವನ್ನು ಸಹಜವಾಗಿ ಗ್ರಹಿಸಲು ಸಾಧ್ಯವಾಗುತ್ತದೆ. ಹಾಗೆಯೇ ಶೇ. ೬೦ ಕ್ಕಿಂತ ಹೆಚ್ಚು ಆಧ್ಯಾತ್ಮಿಕ ಮಟ್ಟವಿರುವ ಮತ್ತು ದೇಹಬುದ್ಧಿಯು ಕಡಿಮೆಯಾಗಿರುವ ಸಾಧಕರ ಪ್ರವಾಸವು ಈಶ್ವರಪ್ರಾಪ್ತಿಯ ದಿಶೆಯಲ್ಲಿ ಶೀಘ್ರಗತಿಯಲ್ಲಿ ಆಗುತ್ತಿರುತ್ತದೆ. ಇಂತಹ ಸಾಧಕರು ಎಂತಹ ಬಟ್ಟೆಗಳನ್ನು ಧರಿಸಬೇಕು ಎಂಬುದಕ್ಕೆ ಹೆಚ್ಚಿನ ಮಹತ್ವವಿರುವುದಿಲ್ಲ; ಹೀಗಿದ್ದರೂ ಅವರು ಸಾತ್ತ್ವಿಕ ಬಟ್ಟೆಗಳನ್ನು ಧರಿಸಿದರೆ ಅವರ ಸಾತ್ತ್ವಿಕತೆಯು ಖಂಡಿತವಾಗಿಯೂ ಹೆಚ್ಚಾಗುತ್ತದೆ, ಮಾತ್ರವಲ್ಲದೇ ಈ ಸಾತ್ತ್ವಿಕತೆಯಿಂದ ಸಮಷ್ಟಿಗೂ ದೊಡ್ಡ ಲಾಭವಾಗುತ್ತದೆ. ಸಾತ್ತ್ವಿಕ ಬಟ್ಟೆಗಳಿಂದ ಮಕ್ಕಳ ಮೇಲೆ ಒಳ್ಳೆಯ ಸಂಸ್ಕಾರಗಳಾಗಲೂ ಸಹಾಯವಾಗುತ್ತದೆ. ಆದುದರಿಂದ ಅವರು ಸಾತ್ತ್ವಿಕ ಬಟ್ಟೆಗಳನ್ನು ಧರಿಸುವುದು ಎಂದಿಗೂ ಕಲ್ಯಾಣಕಾರಿಯೇ ಆಗಿದೆ.

ಸಾತ್ತ್ವಿಕ ಬಟ್ಟೆಗಳ ಹಿಂದಿನ ದೃಷ್ಟಿಕೋನವನ್ನು ತಿಳಿದುಕೊಂಡು ಅದನ್ನು ಆಚರಣೆಯಲ್ಲಿ ತರಲು ಹೆಚ್ಚಿನ ಜನರಿಗೆ ಪ್ರೇರಣೆಯಾಗಲಿ ಮತ್ತು ಅವರ ಸಾತ್ತ್ವಿಕತೆಯು ಹೆಚ್ಚಾಗಲಿ ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ. – **ಸಂಕಲನಕಾರರು**

## ಆಧ್ಯಾತ್ಮಿಕ ದೃಷ್ಟಿಯಿಂದ ಉಡುಪುಗಳ ಶಾಸ್ತ್ರ ಹೇಳುವ ಗ್ರಂಥಗಳು

### ಪುರುಷರಿಗೆ ಆಧ್ಯಾತ್ಮಿಕ ದೃಷ್ಟಿಯಿಂದ ಉಪಯುಕ್ತ ಉಡುಪುಗಳು

- 卐 ಧಾರ್ಮಿಕ ಪ್ರಸಂಗಗಳಲ್ಲಿ ಮಡಿಯನ್ನು ಏಕೆ ಉಡಬೇಕು ?
- 卐 'ಶರ್ಟ್–ಪ್ಯಾಂಟ್'ಗಿಂತ ಅಂಗಿ–ಧೋತಿ ಏಕೆ ಯೋಗ್ಯ ?
- 卐 ಕಾರ್ಯಕ್ಕನುಸಾರ ಟೋಪಿ ಯಾವ ಬಣ್ಣದ್ದಾಗಿರಬೇಕು ?
- 卐 'ಕ್ಯಾಪ್'ಗಿಂತ ಪಾರಂಪರಿಕ ಬಟ್ಟೆಯ ಟೋಪಿ ಅಥವಾ ಪೇಟ ಏಕೆ ಯೋಗ್ಯ ?